ಗೋಕಾಕ್ ತಾಲ್ಲೂಕಿನಲ್ಲಿರುವ ಕೊಳವೆ ಬಾವಿಗಳ ಬಗ್ಗೆ

2138 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995 ರಿಂದ ಗೋಕಾಕ್ ತಾಲ್ಲೂಕಿನಲ್ಲಿ ಕೊರೆದ ಕೊಳವೆ ಬಾವಿಗಳು ಸಂಖ್ಯೆ ಎಷ್ಟು?*

ಆ) *ಇದರಲ್ಲಿ ವಿಫಲವಾದ ಕೊಳವೆಬಾವಿಗಳ ಸಂಖ್ಯೆ ಎಷ್ಟು?*

ಇ) *ಯಶಸ್ವಿಯಾದ ಕೊಳವೆಬಾವಿಗಳ ಪೈಕಿ ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುತ್ ಅಥವಾ ಪಂಪಸೆಟ್ ಅಳವಡಿಸಲಾಗಿದೆ?*

ಈ) *ಇನ್ನೂ ಕೊರೆಯಬೇಕಾದ ಕೊಳವೆಬಾವಿಗಳ ಸಂಖ್ಯೆ ಎಷ್ಟು?*

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) 81.

ಆ) 9.

ಇ) 13.

ಈ) 24.

ಗೋಕಾಕ್ ಬೆಳಗಾವಿ ರಸ್ತೆ ದುರಸ್ತಿ

2139 - ಶ್ರೀ ಚಂದ್ರಶೇಖರ ನಾಯಕ್ (ಗೋಕಾಕ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾವಿಯಿಂದ ಅಂಕಲಗಿಮಾರ್ಗವಾಗಿ ಅಥಣಿಗೆ ಹೋಗುವ ಲೋಕೋಪಯೋಗಿ ರಸ್ತೆ ಉದ್ದಳತೆ ಎಷ್ಟು;*

ಆ) *ಈ ಮಾರ್ಗವನ್ನು ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸಲಾಗುವ ಉದ್ದೇಶ ಸರ್ಕಾರದ ಉದ್ದೇಶ ಇದೆಯೇ;*

ಇ) *ಮೇಲಿನ ರಸ್ತೆಯಲ್ಲಿ ಸಂಚಾರ ಅಧಿಕವಾಗಿದ್ದು ಸದರಿ ರಸ್ತೆಯು ತೀರ ಕೆಟ್ಟು ಹೋಗಿದ್ದು ಸರ್ಕಾರದ ಗಮನಕೆ ಬಂದಿದೆಯೇ;*

ಈ) *ರಸ್ತೆ ದುರಸ್ತಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಬೆಳಗಾಂವಿಯಿಂದ ಅಂಕಲಗಿ ಮಾರ್ಗವಾಗಿ ಅಥಣಿಗೆ ಹೋಗುವ ರಸ್ತೆಯ ಒಟ್ಟು ಉದ್ದ 133.30 ಕಿಮೀ.

ಆ) ಈ ಮಾರ್ಗದ 86.00 ಕಿ.ಮೀ ಉದ್ದಳತೆ ಭಾಗವು ಈಗಾಗಲೇ ಜತ್-ಜಾಂಬೋಟಿ-ಗೋವಾ ರಾಜ್ಯ ಹೆದ್ದಾರಿ (ಕ್ರಸಂ 31)ಯಾಗಿದೆ. ಇನ್ನುಳಿದ ಭಾಗ 47.30 ಕಿಮೀ. ಉದ್ದ ಜಿಲ್ಲಾ ಮುಖ್ಯ ರಸ್ತೆ ದರ್ಜೆಯಾಗಿರುತ್ತದೆ. ಸದರಿ 47.30 ಕಿಮೀ ಉದ್ದ ಜಿಲ್ಲಾ ಮುಖ್ಯ ರಸ್ತೆಯನ್ನು ರಾಜ್ಯ ಹೆದ್ದಾರಿನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

ಇ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ) ಸದರಿ ರಸ್ತೆಯ ಸುಧಾರಣೆಯನ್ನು ಮತ್ತು ಡಾಂಬರು ಮೇಲ್ಮೈಮೇಲೆ ಉಂಟಾದ ತಗ್ಗು ಗುಂಡಿಗಳನ್ನು ತುಂಬುವ ಕಾರ್ಯಕೈಕೊಂಡು ವಾಹನ ಸಂಚಾರಕೆ ಅನುವು ಮಾಡಿಕೊಡಲಾಗಿದೆ. ರಸ್ತೆಯ ದುರಸ್ಥಿ ಹಾಗೂ ಅಭಿವೃದ್ಧಿಯನ್ನು 1995-96ನೇ ಸಾಲಿನಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಒಟ್ಟು 38.03 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ.

ಗೋಕಾಕ್ ತಾಲ್ಲೂಕಿನಲ್ಲಿ ಸರಕಾರಿ ವಸತಿಗೃಹಗಳು

2140 - ಶ್ರೀ ಚಂದ್ರಶೇಖರ ಸದಾಶಿವ ನಾಯಕ (ಗೋಕಾಕ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಗೋಕಾಕ್ ನಗರದಲ್ಲಿ ಸರ್ಕಾರಿ ಅಧಿಕಾರಿಗಳಿಗೆ ವಸತಿಗೃಹಗಳು ಸಾಕಷ್ಟಿಲ್ಲದಿರುವುದು ಸರ್ಕಾರದ ಗಮನಕೆ ಬಂದಿದೆಯೇ?*

2) *ಬಂದಿದ್ದಲ್ಲಿ ಈಗ ಎಷ್ಟು ಅಧಿಕಾರಿಗಳಿಗೆ ವಸತಿಗೃಹ ಒದಗಿಸಲಾಗಿದೆ, ಇನ್ನೂ ಒದಗಿಸಬೇಕಾದ ವಸತಿಗೃಹಗಳ ಸಂಖ್ಯೆ ಎಷ್ಟು?*

3) *ವಸತಿಗೃಹಗಳನ್ನು ಯಾವಾಗ ಒದಗಿಸಲಾಗುವುದು, ಅದರ ಬಗ್ಗೆ ಕೈಗೊಂಡ ಕ್ರಮಗಳೇನು?*

ಶ್ರೀ ಶಿವನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

1) ಬಂದಿದೆ.

2) ಒಂದು ವಸತಿಗೃಹ ಮಾತ್ರ ಒದಗಿಸಲಾಗಿದೆ. ಗೋಕಾಕನಲ್ಲಿ ಅಧಿಕಾರಿಗಳಿಗೆ ಇನ್ನೂ 15 ಸರ್ಕಾರಿ ವಸತಿಗೃಹಗಳ ಅವಶ್ಯವಿದೆ.

3) ಈ ರೀತಿಯ ಸರ್ಕಾರಿ ವಸತಿಗೃಹಗಳ ಕೊರತೆ ರಾಜ್ಯದ ಎಲ್ಲೆಡೆ ಇದೆ. ಈ ಕೊರತೆಯನ್ನು ಹಂತ ಹಂತವಾಗಿ ಆಯವ್ಯಯದಲ್ಲಿ ಸೇರ್ಪಡಿಸಿ ಪೂರೈಸಲು ಕ್ರಮ ಕೈಗೊಳ್ಳಲಾಗುವುದು.

ಬದಾಮಿ ತಾಲ್ಲೂಕಿನಲ್ಲಿ ಕುಡಿಯುವ ನೀರು ಪೂರೈಕೆ